## ತಾಳಿ ಕಟ್ಟಿದರಷ್ಟೇ ಪತಿ

ಝೀ ಕನ್ನಡದ 'ಸತ್ಯ'ದಲ್ಲಿ ಭೀಮನ ಅಮಾವಾಸ್ಯೆಯ ಪೂಜೆಯನ್ನು ತೋರಿಸಿದರು. ಕನ್ಯೆಯರು ಒಳ್ಳೆಯ ಪತಿ ದೊರೆಯಲಿ ಎಂದೂ, ವಿವಾಹಿತ ಮಹಿಳೆಯರು ತಮ್ಮ ಪತಿಯ ಆಯಸ್ಸು, ಆರೋಗ್ಯ ಹಾಗೂ ಶ್ರೇಯಸ್ಸು ಸಿಗಲಿ ಎನ್ನುವ ಆಶಯದಿಂದ ಈ ವ್ರತವನ್ನು ಆಚರಿಸುವುದು ಲೋಕರೂಢಿ. ಈ ಧಾರಾವಾಹಿಯಲ್ಲಿ ಲಗ್ನ ಪತ್ರಿಕೆ ಶಾಸ್ತ್ರ ಮಾತ್ರ ಆಗಿರುವ ದಿವ್ಯಾಳ ಮನೆಗೆ ಅವಳನ್ನು ವಿವಾಹ ಆಗಲಿರುವ ಹುಡುಗ ಕಾರ್ತಿಕ್ ಬರುತ್ತಾನೆ. ದಿವ್ಯಾ ಅವನಿಗೆ ಪಾದ ಪೂಜೆ ಮಾಡುತ್ತಾಳೆ. ತಾಳಿ ಕಟ್ಟುವ ಮೊದಲು ಅವನು ಹೇಗೆ ಪತಿ ಆಗುತ್ತಾನೆ? ದೇವರ ಪೂಜೆ ಮಾಡುತ್ತಲೇ ದಿವ್ಯಾ ಮೊಬೈಲ್‌ನಿಂದ ಮೆಸೇಜ್ ಮಾಡುವುದು ಸರಿ ಅನಿಸುವುದಿಲ್ಲ.

—ಕೆ.ಎಸ್. ಸವಿತ, ಬೆಂಗಳೂರು

## ನನ್ನಪ್ಪ ನೆನಪಾದರು!

ಇತ್ತೀಚೆಗೆ ಚಂದನದಲ್ಲಿ ಮೂಡಿ ಬಂದ ಶಿಕ್ಷಣ ತಜ್ಞ ಗುರುರಾಜ ಕರ್ಜಗಿ ಕಾರ್ಯಕ್ರಮ ಸೊಗಸಾಗಿತ್ತು. ಅವರ ಮಾತು ಮುತ್ತಿನ ಮಣಿಗಳಂತೆ ಇದ್ದವು ಎಂದರೆ ಅತಿಶಯೋಕ್ತಿ ಅಲ್ಲ. ಎಸ್.ಎಸ್.ಎಲ್.ಸಿ. ಫಲಿತಾಂಶದ ವಿಷಯವನ್ನು ಅವರು ಸವಿವರವಾಗಿ ವಿವರಿಸಿದರು. ತಮ್ಮ ಗಣಿತ ಅಧ್ಯಾಪಕರನ್ನು ಮನಸಾರೆ ಸ್ಮರಿಸಿದ್ದು ನನಗೆ ನನ್ನ ತಂದೆ ಶಿವಮೊಗ್ಗದ ಪ್ರೌಢಶಾಲೆಯ ಮುಖ್ಯಶಿಕ್ಷಕರಾದ್ದ ದಿನಗಳು ನೆನಪಾದವು. ಇಂಗ್ಲಿಷ್ ವ್ಯಾಮೋಹದ ಬಗ್ಗೆ ಚೆನ್ನಾಗಿ ಹೇಳಿದರು. ಮಾತೃಭಾಷೆಯ ಮೌಲ್ಯವನ್ನು ಸುಂದರವಾಗಿ ವಿವರಿಸಿದರು. ಶಿಕ್ಷಕರು, ಪೋಷಕರು ಈ ಬಗ್ಗೆ ಗಮನವಹಿಸಬೇಕು.

—ಕಮಲಾದೇವಿ ರಾಜಶೇಖರ್ ಹಳ್ಳೂರ್, ಬೆಂಗಳೂರು

## ಮನೋಜ್ಞ ಔತಣಕೂಟ

ಚಂದನವಾಹಿನಿಯಲ್ಲಿ ಇತ್ತೀಚೆಗೆ ಪ್ರಸಾರವಾದ ಪ್ರಧಾನಿ ಜೊತೆ ಒಲಿಂಪಿಕ್ ಕ್ರೀಡಾಪಟುಗಳ ಔತಣ ಕೂಟ ಕಾರ್ಯಕ್ರಮ ಮನೋಜ್ಞವಾಗಿತ್ತು. ಪ್ರತಿಯೊಬ್ಬ ಆಟಗಾರರಿಗೂ ಗೌರವ ಮತ್ತು ಪ್ರೀತಿಯಿಂದ ಆತಿಥ್ಯ ನೀಡಿದ್ದು ಹೆಮ್ಮೆ ಮೂಡಿಸಿತು. ಆಟಗಾರರ ಜೊತೆ ತರಬೇತುದಾರರನ್ನೂ ಸಮಾನವಾಗಿ ಪರಿಚಯಿಸಿದರು. ಎಲ್ಲಕ್ಕಿಂತ ಕ್ರೀಡಾ ಕ್ಷೇತ್ರದ ಅಗತ್ಯದ ಬಗ್ಗೆ ಬೆಳಕು ಚೆಲ್ಲಿದಂತಹ ಸಂದರ್ಭ. ಆ ಔತಣಕೂಟ ಕೇವಲ ಔಪಚಾರಿಕವಾಗಿರದೆ ಇಡೀ ರಾಷ್ಟ್ರವೇ ಕ್ರೀಡೆಗಳ ಬಗ್ಗೆ ಹೊಸ ನಿಲುವು–ಒಲವು ಮೂಡಿಸುವ ವೀರ ಸಂಕಲ್ಪದ ಮಂಟಪದಂತೆ ಕಂಗೊಳಿಸುತ್ತಿತ್ತು.

—ವಿಶ್ವನಾಥ ಎಚ್.ಕೆ., ಬೆಂಗಳೂರು

**ವಾರದ ಪತ್ರ**

## ತೀರ್ಪುಗಾರ್ತಿ ಏಕಿಲ್ಲ?

ಗಾಯಕ ಎಸ್.ಪಿ. ಬಾಲಸುಬ್ರಹ್ಮಣ್ಯಂ ಅವರ ನೇತೃತ್ವದಲ್ಲಿ ಮೂಡಿ ಬರುತ್ತಿದ್ದ ರಿಯಾಲಿಟಿ ಶೋ 'ಎದೆ ತುಂಬಿ ಹಾಡುವೆನು' ಪ್ರಸ್ತುತದಲ್ಲೂ ಎಲ್ಲ ಸಂಗೀತ ಪ್ರೇಮಿಗಳ ಮನಸ್ಸಿನಲ್ಲಿ ಈ ಕಾರ್ಯಕ್ರಮ ಹಸಿರಾಗಿದೆ. ಕಲರ್ಸ್ ಕನ್ನಡದಲ್ಲಿ ಅದೇ ಹೆಸರಿನ ಕಾರ್ಯಕ್ರಮ ಬರುತ್ತಿರುವುದು ನಮಗೆಲ್ಲ ಸಂತೋಷದ ವಿಷಯ. ನಿರೂಪಣೆಯೂ ಅಷ್ಟೇ ನವಿರಾಗಿದೆ. ಒಂದೇ ಕೊರತೆ ಎಂದರೆ ನಾಲ್ವರು ಸಾಧಕ ತೀರ್ಪುಗಾರರಲ್ಲಿ ಒಬ್ಬರಾದರೂ ಮಹಿಳೆ ಇಲ್ಲದಿರುವುದು ಬೇಸರದ ಸಂಗತಿ.

—ಟಿ.ಎಸ್. ಪ್ರತಿಭಾ ಚಿತ್ರದುರ್ಗ

## ದಾರಿ ತಪ್ಪಿದ ಕಥೆ

ಕಲರ್ಸ್‌ನ 'ಮಂಗಳ ಗೌರಿ' ಮತ್ತು 'ಕನ್ನಡತಿ' ಧಾರಾವಾಹಿ ಹೆಚ್ಚು ಕಡಿಮೆ ಒಂದೇ ದಾರಿಯಲ್ಲಿ ಸಾಗುತ್ತಿವೆ. ಪ್ರೇಕ್ಷಕರನ್ನು ಹಿಡಿದಿಟ್ಟುಕೊಳ್ಳಬೇಕೆಂದು ಒಂದಕ್ಕೊಂದು ಪೈಪೋಟಿ ನಡೆಸುತ್ತಿವೆ. ಈ ಕಡೆ ಮನಗಳಗೌರಿ ತನ್ನ ಗಂಡನ ಸೇರಿಕೊಳ್ಳುವ ಅವಕಾಶವನ್ನು ವಿನಾಕಾರಣ ಮುಂದಕ್ಕೆ ಹಾಕುತ್ತಾಳೆ. ಹಾಗೆಯೇ ಕನ್ನಡತಿಯಲ್ಲಿ ನಾನಾ ತಿರುವುಗಳನ್ನು ತುರುಕಿ ಕಥೆಯನ್ನು ಅಸಂಬದ್ಧ ಮಾಡುತ್ತಿದ್ದಾರೆ. ಇದರಿಂದ ಪೆಕ್ಷಕರನ್ನು ಗಲಿಬಿಲಿ ಮಾಡಿದಂತೆ ಆಗುತ್ತದೆ. ಹೀಗೆ ಕಥೆಯನ್ನು ವಿನಾಕಾರಣ ಮುಂದುವರಿಸುವುದು ಅಸಂಬದ್ಧ.

—ರಾಮಚಂದ್ರ, ನಾಡಿಗ್

## ಕನ್ನಡದಲ್ಲಿ ಮಾತಾಡಿದರೆ ಚಂದ

ಕಲರ್ಸ್ ಕನ್ನಡದಲ್ಲಿ ಎದೆ ತುಂಬಿ ಹಾಡುವೆನು ಕಾರ್ಯಕ್ರಮ ಬರುತ್ತಿರುವುದು ತುಂಬಾ ಸಂತೋಷವಾಗುತ್ತಿದೆ. ನಾನು ಸಂಗೀತ ಕಲಿಯುತ್ತಿರುವುದರಿಂದ ಈ ಕಾರ್ಯಕ್ರಮ ನೋಡಿ ಸಂಗೀತದ ಜ್ಞಾನ ಪಡೆದುಕೊಳ್ಳುತ್ತಿದ್ದೇನೆ. ಈ ಕಾರ್ಯಕ್ರಮ ನೋಡುತ್ತಿದ್ದರೆ ಎಸ್.ಪಿ. ಬಾಲಸುಬ್ರಹ್ಮಣ್ಯಂ ಅವರ ನೆನಪು ಕಾಡುತ್ತದೆ. ಎಸ್ಪಿಬಿ ಅವರ ಮಗ ಚರಣ್ ನೋಡಿ ಸಂತೋಷವಾಯಿತು. ಆದರೆ ಅವರು ಕನ್ನಡ ಮಾತನಾಡದೆ ಅನ್ಯ ಭಾಷೆಯಲ್ಲಿ ಮಾತನಾಡಿದ್ದು ಬೇಸರ ತಂದಿತು. ಕನ್ನಡ ಹಾಡಿನ ಜೊತೆಗೆ ಕನ್ನಡ ಮಾತನಾಡಿದರೆ ಆ ಕಾರ್ಯಕ್ರಮಕ್ಕೆ ಮತ್ತಷ್ಟು ಮೆರಗು ಬರುತ್ತಿತ್ತು.

—ಇಂಚರ ದತ್, ಬೆಂಗಳೂರು

## ಲಕ್ಷ್ಮಿ ಹಬ್ಬದಲ್ಲಿ ಕೃಷ್ಣಗಾಯನ

ಸ್ಟಾರ್ ಸುವರ್ಣದ 'ಸೂಪರ್ ಸ್ಟಾರ್'ನಲ್ಲಿ ಶುಕ್ರವಾರದ ವರಮಹಾಲಕ್ಷ್ಮಿ ಹಬ್ಬದ ಕಂತಿನಲ್ಲಿ ಸ್ಪರ್ಧಿಗಳನ್ನು ದೀಪ ಬೆಳಗಿಸಲು ಕರೆದರು. ಆಗ ಹಿನ್ನೆಲೆಯಲ್ಲಿ ಲಕ್ಷ್ಮಿಗೆ ಸಂಬಂಧಿಸಿದ ಹಾಡನ್ನು ಹಾಕದೆ ಕೃಷ್ಣನಿಗೆ ಸಂಬಂಧಿಸಿದ ಹಾಡು ಹಾಕಿದ್ದು ಎಷ್ಟು ಸರಿ? ಕೊನೆಪಕ್ಷ ಜನಪ್ರಿಯ ಗೀತೆ ಭಾಗ್ಯದಲಕ್ಷ್ಮಿ ಬಾರಮ್ಮ ಹಾಕಬಹುದಿತ್ತು.

—ಸೀತಾ ಕೇಶವ ಸಿಡ್ನಿ

## ಎಡವಟ್ಟು ಬೇಡ

ಝೀ ಕನ್ನಡದಲ್ಲಿ ಹೊಸದಾಗಿ ಆರಂಭಿಸಿರುವ 'ಹಿಟ್ಲರ್ ಕಲ್ಯಾಣ'ದಲ್ಲಿ ಕಥಾನಾಯಕ ಹಿಟ್ಲರ್ ಮುಖಕ್ಕೆ ಕೇಕ್ ಮೆತ್ತುತ್ತಾರೆ.

ಮೂವರು ಸೊಸೆಯಂದಿರು ತಮ್ಮ ಮಾವನಿಗೆ ತಕ್ಕ ಹೆಂಡತಿ ಅಂದರೆ ತಮಗೆ ತಕ್ಕ ಅತ್ತೆಯ ಹುಡುಕಾಟದಲ್ಲಿ ಒಬ್ಬ ಎಡವಟ್ಟು ಅತ್ತೆಯನ್ನು ಮಾವನಿಗೆ ಗೊತ್ತುಪಡಿಸಿದ್ದು, ಹಿಟ್ಲರ್ ಮುಖಕ್ಕೆ ಕೇಕ್ ಮೆತ್ತುವ ಸನ್ನಿವೇಶ ನಿರ್ಮಿಸುವವರ ದೃಷ್ಟಿಯಲ್ಲಿ ಸರಿ ಇರಬಹುದು. ವೀಕ್ಷಕರಾದ ನಮಗೆ ಇದು ಇಷ್ಟ ಆಗುವುದಿಲ್ಲ. ಆದ್ದರಿಂದ ಕಥೆ ಎಡವಟ್ಟು ಆಗುವುದು ಬೇಡ.

—ಎಸ್.ಆರ್. ಚಿಕ್ಕಣ್ಣ ಕತ್ತರಗುಪ್ಪೆ, ಬೆಂಗಳೂರು

## ಸರಿಗಮಪ ಬರಲಿ

ಝೀ ಕನ್ನಡದಲ್ಲಿ 'ಸರಿಗಮಪ' ಬೇಗ ಆರಂಭಿಸಲಿ. ನಾದಬ್ರಹ್ಮ ಹಂಸಲೇಖ ಅವರು ಈ ಕಾರ್ಯಕ್ರಮವನ್ನು ನಡೆಸಿ ಜನರ ಮನಸ್ಸನ್ನು ಸಂಗೀತಮಯಗೊಳಿಸಬೇಕು. ಬೇಗ ಈ ಕಾರ್ಯಕ್ರಮ ಆರಂಭವಾಗಲಿ. ಮನೆಯಲ್ಲಿ ಕುಳಿತಿರುವ ಹಿರಿಯ ನಾಗರಿಕರು ಇಂತಹ ಅದ್ಭುತ ಕಾರ್ಯಕ್ರಮಗಳಿಂದ ಸಂತೋಷಪಡುತ್ತಾರೆ.

—ಬಸಪ್ಪ ಸೊ. ಮುಳ್ಳೂರ, ಹಲಗತ್ತಿ

## ಬಿಗ್ ಬಾಸ್... ಮೊಟ್ಟೆಯ ಕತೆ!

ಇತ್ತೀಚೆಗೆ ಮುಗಿದ ಬಿಗ್ ಬಾಸ್ 8ನೇ ಅವತರಣಿಕೆಯಲ್ಲಿ ಸ್ಪರ್ಧಿಗಳ ನಡುವೆ ತಲೆಗೆ ಸ್ವಯಂ ಮೊಟ್ಟೆ ಒಡೆದುಕೊಳ್ಳುವ ಸ್ಪರ್ಧೆ ಇಡಲಾಗಿತ್ತು.

ಹೀಗೆ ಪೋಲಾಗುವ ಆಹಾರದ ಟಾಸ್ಕ್‌ಗಳು ಬೇಡ. ಈ ಬಗ್ಗೆ 'ಜಾಣರ ಪೆಟ್ಟಿಗೆ'ಯಲ್ಲಿ ಪತ್ರಗಳೂ ಬಂದಿವೆ. ಇದರಿಂದ ಯುವಕರು ಸ್ಫೂರ್ತಿ ಪಡೆದು ಬೇರೆ ಬೇರೆ ಕಾರ್ಯಕ್ರಮಗಳಲ್ಲಿ ಇದನ್ನು ಅನುಕರಣೆ ಮಾಡಿಯಾರು. ಯಾವತ್ತೂ ಸಮಾಜಕ್ಕೆ ಉತ್ತಮ ಸಂದೇಶಗಳು ತಲುಪಲಿ.

—ನಗರ ಗುರುದೇವ್ ಭಂಡಾರ್ಕರ್, ಹೊಸನಗರ